**ಹಿರಿಯ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ., ರವರ  ನ್ಯಾಯಾಲಯ, ಹಿರಿಯೂರು.**

**ಸಿ.ಸಿ ಸಂಖ್ಯೆಃ 542/2023**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಲೋಕೇಶ್ ಹೆಚ್ ವಿ | ಸಿಡಬ್ಲ್ಯೂ-16 |
| ತಂದೆಯ  ಹೆಸರು | - | ವೆಂಕಟರಮಣ | ಪಿಡಬ್ಲ್ಯೂ-3 |
| ವಯಸ್ಸು | - | ಸು. 42  ವರ್ಷ | ಪ್ರ.ವ.ಬೋ<br>ದಿನಾಂಕಃ15.04.2026 |
| ಉದ್ಯೋಗ | - | ಪಿ ಟಿ ಎಸ್ ಐಮಂಗಲ | |
| ವಾಸ | - | ಚಿತ್ರದುರ್ಗ | |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ-**

ನಾನು ಏಪ್ರಿಲ್ 2022  ರಿಂದ ಜೂನ್  2023 ರ ವರೆಗೆ  ಹಿರಿಯೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ,  ಪಿ ಎಸ್ ಐ ಆಗಿ  ಕೆಲಸ ನಿರ್ವಹಿಸಿರುತ್ತೇನೆ.

ದಿನಾಂಕಃ 09.02.2023  ರಂದು ಸಂಜೆ  7.00 ರ ಸಮಯದಲ್ಲಿ ಚಾಸಾ.1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ  ಠಾಣಾ ಗುನ್ನಾ ನಂ,43/2023 ರಂತೆ  ಪ್ರಕರಣ ದಾಖಲಿಸಿದ್ದೇನೆ. ಪ್ರ ವ ವರದಿ ಯನ್ನು ಮೇಲಾಧಿಕಾರಿಗೆ ಮತ್ತು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ಸಾಕ್ಷಿ ದೂರಿನಲ್ಲಿ ಸಹಿ ನೋಡಿ ಗುರುತಿಸಿದ್ದು ಸಹಿಯನ್ನುನಿಪಿ-1(ಬಿ) ಎಂದು , ಪ್ರ ವ ವರದಿಯನ್ನು ನಿಪಿ-10 ಎಂದು ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು.

ನಂತರ ಮುಂದಿನ ತನಿಖೆಗಾಗಿ ಕಡತವನ್ನು  ಚಾಸಾ.17 ರವರಿಗೆ ವಹಿಸಿಕೊಟ್ಟಿರುತ್ತೇನೆ.

**ಪಾಟೀ-ಸವಾಲುಃ ಆರೋಪಿ ಪರ ಶ್ರೀ ಆರ್ ಟಿ ಎಸ್  ವಕೀಲರಿಂದಃ-**

ದಿನಾಂಕಃ 09.02.2023 ರಂದು ಸಂಜೆ 7.00 ರ ಸಮಯದಲ್ಲಿ ದೂರುದಾರರು ಠಾಣೆಗೆ ಹಾಜರಾಗಿಲ್ಲ ಎಂದರೆ ಸರಿಯಲ್ಲ ಮತ್ತು ನಾನು ಯಾವುದೇ ಲಿಖಿತ ದೂರನ್ನು ಸ್ವೀಕರಿಸಿಲ್ಲ ಎಂದರೆ ಸರಿಯಲ್ಲ.

ನಂತರ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ.17 ರವರಿಗೆ ವಹಿಸಿಕೊಟ್ಟಿರುತ್ತೇನೆ ಎಂದು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡದಿದ್ದರೂ ಸಹ ಆರೋಪಿ ವಿರುದ್ದ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹಿರಿಯೂರು.